# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ | : | 45 |
| ಸದಸ್ಯರ ಹೆಸರು | : | ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | : | 13.02.2023 |
| ಉತ್ತರಿಸುವ ಸಚಿವರು | : | ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಹಾಗೂ ಸಕಾಲ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಶಾಲಾ-ಮಕ್ಕಳಿಗೆ ಸರ್ಕಾರ ಮಧ್ಯಾಹ್ನದ ಊಟದಲ್ಲಿ ಕೋಳಿ ಮೊಟ್ಟೆ ನೀಡಲು ರಾಷ್ಟ್ರೀಯ ಪೌಷ್ಠಿಕತೆ ಸಂಸ್ಥೆ ಮತ್ತು ಕರ್ನಾಟಕ ರಾಜ್ಯ ಸೆಕೆಂಡರಿ ಶಿಕ್ಷಣ ಇಲಾಖೆಗೆ ಶಿಫಾರಸ್ಸು ಮಾಡಿರುವುದು ನಿಜವೇ; | ರಾಜ್ಯದಲ್ಲಿ 6 ರಿಂದ 15ನೇ ವಯೋಮಾನದವರೆಗಿನ ಶಾಲಾ ಮಕ್ಕಳಲ್ಲಿ ಅಂದರೆ 1 ರಿಂದ 8ನೇ ತರಗತಿ ಮಕ್ಕಳಲ್ಲಿ ಅಪೌಷ್ಠಿಕತೆ, ರಕ್ತಹೀನತೆ ಹಾಗೂ ಬಹುಪೋಷಕಾಂಶಗಳ ನ್ಯೂನತೆ ಅಧಿಕವಾಗಿರುವುದು ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ-2019-20 ರಲ್ಲಿ ಕಂಡುಬಂದಿರುತ್ತದೆ. ಇದರ ನಿವಾರಣೆಗಾಗಿ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ 1-8ನೇ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಪೂರಕ ಪೌಷ್ಠಿಕಾಂಶದ ರೂಪದಲ್ಲಿ ಮೊಟ್ಟೆ ಅಥವಾ ಮೊಟ್ಟೆ ಸೇವಿಸದ ಮಕ್ಕಳಿಗೆ ಬಾಳೆಹಣ್ಣು/ಚಿಕ್ಕಿಯನ್ನು ಪೂರೈಸಲು 2021-22ನೇ ಸಾಲಿನಿಂದ ಕ್ರಮವಹಿಸಲಾಗಿದೆ. |
| ಆ) | ಹಾಗಿದ್ದಲ್ಲಿ, ಕೋಳಿ ಮೊಟ್ಟೆಯನ್ನು ಪೂರೈಸಲಾಗುತ್ತಿದೆಯೇ; ಕಳೆದ ಮೂರು ವರ್ಷಗಳಲ್ಲಿ ಕೋಳಿ ಮೊಟ್ಟೆ ವಿತರಣೆಗೆ ನೀಡಲಾಗುತ್ತಿರುವ ಅನುದಾನ ಒಳಗೊಂಡಂತೆ ಪೂರ್ಣ ವಿವರ ನೀಡುವುದು; | 2021-22ನೇ ಸಾಲಿನಲ್ಲಿ ಮೊದಲಿಗೆ ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳಲ್ಲಿ ಮತ್ತು ವಿಜಯಪುರ ಜಿಲ್ಲೆಯಲ್ಲಿ ಈ ಕಾರ್ಯಕ್ರಮವನ್ನು ಅನುಷ್ಠಾನ ಮಾಡಿ, ನಂತರ 2022-23ನೇ ಸಾಲಿನಲ್ಲಿ ರಾಜ್ಯ ಎಲ್ಲಾ ಜಿಲ್ಲೆಗಳಿಗೆ ಸದರಿ ಕಾರ್ಯಕ್ರಮವನ್ನು ವಿಸ್ತರಿಸಲಾಗಿದೆ. 2021-22ನೇ ಮತ್ತು 2022-23ನೇ ಸಾಲಿನಲ್ಲಿ ಸದರಿ ಕಾರ್ಯಕ್ರಮವನ್ನು ಅನುಷ್ಠಾನ ಮಾಡಲು ಒದಗಿಸಲಾಗಿರುವ ಅನುದಾನದ ವಿವರ ಕೆಳಕಂಡಂತಿದೆ. |

| ವರ್ಷ | ವಿದ್ಯಾರ್ಥಿಗಳ ಸಂಖ್ಯೆ | ಒದಗಿಸಲಾಗಿರುವ ಅನುದಾನ (ರೂ ಕೋಟಿಗಳಲ್ಲಿ) |
|---|---|---|
| 2021-22 | 14.44 ಲಕ್ಷ | 39.86 |
| 2022-23 | 45.92 ಲಕ್ಷ | 126.75 |

| | | |
|---|---|---|
| ಇ) | ರಾಜ್ಯದಲ್ಲಿ ಇತ್ತೀಚೆಗೆ ಶಾಲಾ-ಮಕ್ಕಳಿಗೆ ಮಧ್ಯಾಹ್ನ ಊಟಕ್ಕೆ ಸಾತ್ವಿಕ ಆಹಾರವನ್ನು ನೀಡುವಂತೆ ಸರ್ಕಾರಕ್ಕೆ ಮಠಾಧೀಶರುಗಳಿಂದ ಮತ್ತು ಸಮಾಜದ ಗಣ್ಯರಿಂದ ಸಲಹೆಗಳು ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಈ ರೀತಿ ಬಂದಿರುವ ಸಲಹೆಗಳನ್ನು ಮತ್ತು ಪತ್ರಗಳನ್ನು ಒಳಗೊಂಡಂತೆ ಪೂರ್ಣ ಮಾಹಿತಿ ನೀಡುವುದು; | ಶಿಕ್ಷಣ ತಜ್ಞರಿಂದ, ಕೆಲವು ಮಠಾಧೀಶರುಗಳಿಂದ ಮತ್ತು ಸಂಘ ಸಂಸ್ಥೆಗಳಿಂದ ಮೊಟ್ಟೆಯ ಬದಲಾಗಿ ಸಸ್ಯಹಾರಿ/ಸಾತ್ವಿಕ ಆಹಾರದ ನೀಡುವಂತೆ ಮೌಖಿಕವಾಗಿ / ಲಿಖಿತವಾಗಿ ಸಲಹೆಗಳು ಬಂದಿರುತ್ತವೆ. ಆದರೆ, ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆಯ ವರದಿಯ ಪ್ರಕಾರ ವಿದ್ಯಾರ್ಥಿಗಳಿಗೆ ಪೂರಕ ಪೌಷ್ಠಿಕಾಂಶ ರೂಪದಲ್ಲಿ ಮೊಟ್ಟೆ ಅಥವಾ ಮೊಟ್ಟೆ ಸೇವಿಸದ ಮಕ್ಕಳಿಗೆ ಬಾಳೆಹಣ್ಣು ಮತ್ತು ಚಿಕ್ಕಿ ಪೂರೈಸುವುದನ್ನು ಮುಂದುವರಿಸಲಾಗುತ್ತಿದೆ. |
| ಈ) | ಸಾತ್ವಿಕ ಆಹಾರ ಎಂದರೇನು ಮತ್ತು ಇದರಲ್ಲಿ ಅಡಕವಾಗಿರುವ ಪೌಷ್ಠಿಕಾಂಶಗಳು ಯಾವುವು ಹಾಗೂ ಈ ಸಾತ್ವಿಕ ಆಹಾರ ವೈಶಿಷ್ಟತೆ ಏನು ಮತ್ತು ಇದರ ಉಪಯೋಗವನ್ನು ಯಾವ ಸಂಸ್ಥೆಯಿಂದ ತುಲನಾತ್ಮಕ ತನಿಖೆ ನಡೆಸಿ ವರದಿಯನ್ನು ಪಡೆಯಲಾಗಿದೆ; (ಪೂರ್ಣ ವಿವರ ನೀಡುವುದು) | ಸಾತ್ವಿಕ ಆಹಾರ ಎಂದರೇನು ಎಂಬ ಬಗ್ಗೆ ಇಲಾಖೆಯಲ್ಲಿ ಯಾವುದೇ ಚರ್ಚೆ ನಡೆದಿರುವುದಿಲ್ಲ. |
| ಉ) | ರಾಜ್ಯದಲ್ಲಿ ಶಾಲಾ-ಮಕ್ಕಳಿಗೆ ಮಧ್ಯಾಹ್ನದ ಊಟದಲ್ಲಿ ಸಾತ್ವಿಕ ಆಹಾರವನ್ನು ಯಾವ ಶೈಕ್ಷಣಿಕ ವರ್ಷದಿಂದ ನೀಡಲು ಉದ್ದೇಶಿಸಲಾಗಿದೆ; ಈ ಬಗ್ಗೆ ಸರ್ಕಾರಿ ಆದೇಶ ಅಥವಾ ಸುತ್ತೋಲೆಯನ್ನು ಶಿಕ್ಷಣ ಇಲಾಖೆಗೆ ನೀಡಿದೆಯೇ? (ಹಾಗಿದ್ದಲ್ಲಿ, ಸರ್ಕಾರಿ ಆದೇಶ ಅಥವಾ ಸುತ್ತೋಲೆ ಪ್ರತಿಯೊಂದಿಗೆ ಪೂರ್ಣ ಮಾಹಿತಿ ನೀಡುವುದು) | ಅನ್ವಯಿಸುವುದಿಲ್ಲ. |

**ಇಪಿ 04 ಎಂಎಂಎಸ್ 2023**

(ಬಿ.ಸಿ. ನಾಗೇಶ್)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ
ಹಾಗೂ
ಸಕಾಲ ಸಚಿವರು.